**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.686/2014**

**ಪಿ.ಡಬ್ಲ್ಯೂ: 14**

**ಸಿ.ಡಬ್ಲ್ಯೂ: 16**

| | | |
|---|---|---|
| **ಹೆಸರು** | : | ನೇತ್ರಮ್ಮ |
| ಗಂಡನ **ಹೆಸರು** | : | ನಾಗರಾಜ್ ಬಿ.ಎಲ್. |
| **ವಯಸ್ಸು** | : | 43 **ವರ್ಷ** |
| **ಉದ್ಯೋಗ** | : | ಮಹಿಳಾ ಪೊಲೀಸ್ ಕಾನ್ಸಸ್ಟೇಬಲ್ |
| **ವಾಸಸ್ಥಳ** | : | ತರೀಕೆರೆ |

**ದಿನಾಂಕ: 14-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕ**ರವರಿಂದ.**

2010 ರಿಂದ 2017ನೇ ಜುಲೈ ವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಮಹಿಳಾ ಪೇದೆಯಾಗಿ **ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕ: 26-03-2014 ರಂದು ಚಾಸಾ-21 ರವರು ನನಗೆ ಮಹಜರ್ ಬರೆಯಲು ಸೂಚನೆ ನೀಡಿದ್ದು, ಅದರಂತೆ ನಾನು ನಮ್ಮ ಠಾಣೆಯಲ್ಲಿ ಅಮಾನತ್ತು ಮಹಜರನ್ನು ಬರೆದಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ನನಗೆ ಗೊತ್ತಿರುತ್ತದೆ. ನನ್ನ ಸಮಕ್ಷಮ ಚಾಸಾ-21 ರವರು ಚಾಸಾ-13 ಮತ್ತು 15 ರವರು ಹಾಜರುಪಡಿಸಿದ ನಡವಳಿಕೆ ಪುಸ್ತಕಗಳನ್ನು ಪಡೆದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಮಹಜರ್ ನ ಸತ್ಯ ಪ್ರತಿಯಾಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ನಿಪಿ-5 ಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1ನೇ ಆರೋಪಿತರ ಪರ ಶ್ರೀ ಕೆ ಎಲ್ ಆರ್ ವಕೀಲರಿಂದ.**

ನಿಪಿ-5 ರಲ್ಲಿ ನಮೂದು ಮಾಡಿರುವ ವಸ್ತುಗಳು ಎಲ್ಲಿದ್ದವು ಎಂದರೆ ಠಾಣೆಯಲ್ಲಿ ಇರುತ್ತವೆ. ನಿಪಿ-5ಕ್ಕೆ ಪಂಚರವನ್ನು ಚಾಸಾ-21ರವರು ಕರೆದುಕೊಂಡು ಬಂದಿರುತ್ತಾರೆ. ಪಂಚರ ಸಮಕ್ಷಮ ನಿಪಿ-5 ರಂತೆ ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿದ್ದೇವೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. 1ನೇ ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ಸುಳ್ಳು ಮಹಜರ್ ಕ್ರಮವನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ-5 ರಲ್ಲಿ ಸಾಕ್ಷಿದಾರರು ನನ್ನ ಸಮಕ್ಷಮ ನಿಪಿ-5 ಕ್ಕೆ ಸಹಿ ಮಾಡದೇ ಇದ್ದರೂ ಸಹ ಈ ಪ್ರಕರಣಕ್ಕೆ ಸದರಿ ದಾಖಲೆಯನ್ನು ಸೃಷ್ಠಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ನಿಪಿ-5 ರಲ್ಲಿ ಬರೆದ ಸಂಗತಿಗಳು ಸಾಕ್ಷಿದಾರರು ಗೊತ್ತಿಲ್ಲಎಂದರೆ ಸಾಕ್ಷಿಯು ಗೊತ್ತಿದೆ ಎಂದು ನುಡಿಯುತ್ತಾರೆ. ನಾನು ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***<u>ಪಾಟೀ ಸವಾಲು ಃ 2 ನೇ ಆರೋಪಿತರ ಪರ ವಕೀಲರಿಂದ.</u>***

ನಿಪಿ-5 ನ್ನು ಅಮಾನತ್ತು ಮಹಜರ್ ಮಾಡುವ ಕಾಲದಲ್ಲಿ ಈ ಪ್ರಕರಣದಲ್ಲಿ ನಡವಳಿಕೆ ಪುಸ್ತಕಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಬರೆದಿರುವ ಒಕ್ಕಣಿಕೆ ಯಾವ ವಿಚಾರಕ್ಕಾಗಿ ಅಮಾನತ್ತುಪಡಿಸಿಕೊಂಡಿದ್ದಾರೆಂದು ನನಗೆ ಗೊತ್ತು. ನಿಪಿ-5 ನ್ನು ಈ ಪ್ರಕರಣಕ್ಕಾಗಿ ವಶಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u> ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***